# ಅಮೆರಿಕದಲ್ಲಿ ಸ್ವಾಮಿ ವಿವೇಕಾನಂದರು

ಆಂಗ್ಲ ಮೂಲ : ಮೇರಿ ಲೂಯಿ ಬರ್ಕ್ ಸಂಗ್ರಹಾನುವಾದ : ಸ್ವಾಮಿ ವೀರೇಶಾನಂದ

## ಭಾಗ ೨೪

### ಡೆಟ್ರಾಯ್ಟ್‌ನಲ್ಲಿ ಸ್ವಾಮಿ ವಿವೇಕಾನಂದರು (ಮುಂದುವರಿದ ಭಾಗ)

ಸ್ವಾಮಿ ವಿವೇಕಾನಂದರು ಡೆಟ್ರಾಯ್ಟ್ ನಗರದಲ್ಲಿ ತಮ್ಮ ಮೂರನೆಯ ಪ್ರವಚನವನ್ನು ಮಾಡಿದ್ದು 'ಮಾನವನ ದಿವ್ಯತೆ' ಎನ್ನುವ ವಿಷಯದ ಬಗ್ಗೆ, ಯುನಿಟೇರಿಯನ್ ಚರ್ಚ್‌ನಲ್ಲಿ , ಶನಿವಾರ, ಫೆಬ್ರವರಿ ೧೭, ೧೮೯೪ರಂದು. ಡೆಟ್ರಾಯ್ಟ್ ನಗರದ ಹಲವಾರು ಪತ್ರಿಕೆಗಳು ಇದರ ಬಗ್ಗೆ ಸುದೀರ್ಘವಾಗಿ ವರದಿ ಮಾಡಿದವು. ಫ್ರೀ ಪ್ರೆಸ್ ಪತ್ರಿಕೆಯ ಫೆಬ್ರವರಿ ೧೮ರ ಸಂಚಿಕೆಯಲ್ಲಿ ಪ್ರಕಟವಾದ ಇದರ ವರದಿಯ ಸಂಕ್ಷಿಪ್ತ ಅವತರಣಿಕೆ ಹೀಗಿದೆ:

''ಹಿಂದೂ ತತ್ತ್ವಶಾಸ್ತ್ರಜ್ಞರಾದ ಸ್ವಾಮಿ ವಿವೇಕಾನಂದರು ತಮ್ಮ ಪ್ರವಚನಗಳ ಸರಣಿಯನ್ನು ನಿನ್ನೆಯ ರಾತ್ರಿ ಯುನಿಟೇರಿಯನ್ ಚರ್ಚಿನಲ್ಲಿ ಸಂಪನ್ನಗೊಳಿಸಿದರು. ಅವರು 'ಮಾನವನ ದಿವ್ಯತೆ' ಎಂಬ ವಿಷಯವಾಗಿ ಮಾತನಾಡಿದರು. ವಾತಾವರಣದಲ್ಲಿ ವೈಪರೀತ್ಯವಿದ್ದರೂ ಕೂಡ, ಭಾಷಣ ಆರಂಭವಾಗುವುದಕ್ಕೆ ಅರ್ಧಗಂಟೆ ಮುಂಚೆಯೇ ಬಾಗಿಲಗಳ ತನಕ ಜನರು ಕಿಕ್ಕಿರಿದು ನೆರೆದಿದ್ದರು. ನಂತರ ನಮ್ಮ ಪೂರ್ವದೇಶದ ಸಹೋದರರು (ಸ್ವಾಮೀಜಿ) ವೇದಿಕೆಯಲ್ಲಿ ಕಾಣಿಸಿಕೊಂಡರು. ಎಲ್ಲ ಉದ್ಯೋಗ, ಉದ್ಯಮಗಳಿಗೆ ಸೇರಿದ ಜನರು ಅಲ್ಲಿ ಸೇರಿದ್ದರು. ಅವರೆಲ್ಲರೂ ಏಕಾಗ್ರಚಿತ್ತದಿಂದ ಸ್ವಾಮಿ ವಿವೇಕಾನಂದರ ಪ್ರವಚನವನ್ನು ಆಲಿಸಿದರು. ಅವರಲ್ಲಿ ವಕೀಲರು, ನ್ಯಾಯಾಧೀಶರು, ಕ್ರೈಸ್ತ ಪಾದ್ರಿಗಳು, ವ್ಯಾಪಾರಿಗಳು ಮತ್ತು ಯೆಹೂದಿ ಪಾದ್ರಿಗಳು ಇದ್ದರು. ಇದಲ್ಲದೆ ಅತ್ಯಧಿಕ ಸಂಖ್ಯೆಯಲ್ಲಿ ಮಹಿಳೆಯರು ಕೂಡ ನೆರೆದಿದ್ದರು. ಅವರು ಸ್ವಾಮೀಜಿಯವರ ಎಲ್ಲ ಪ್ರವಚನಗಳಿಗೂ ಮತ್ತೆ ಮತ್ತೆ ಬರುತ್ತಿದ್ದರು ಹಾಗೂ ಅತ್ಯಂತ ಗಮನವಿಟ್ಟು ಕೇಳಿಸಿಕೊಳ್ಳುತ್ತಿದ್ದರು. ಇದಲ್ಲದೆ, ಸ್ವಾಮಿ ವಿವೇಕಾನಂದರ ಮೇಲೆ ಪ್ರಶಂಸೆಯ ಮಳೆಯನ್ನೇ ಸುರಿಸುತ್ತಿದ್ದರು.

''ಪ್ರವಚನವು ತತ್ತ್ವಶಾಸ್ತ್ರವನ್ನು ಆಧರಿಸಿತ್ತು. ಸುಮಾರು ಎರಡು ಗಂಟೆಗಳ ಕಾಲ ಸ್ವಾಮೀಜಿಯವರು ಮಾನವತೆ ಮತ್ತು ದಿವ್ಯತೆಗಳ ನಡುವಿನ ಸಂಬಂಧದ ತಾತ್ತ್ವಿಕ ವಿಚಾರಗಳನ್ನು ಮಂಡಿಸಿದರು. ಈ ಎಲ್ಲ ವಿಚಾರಗಳು ಕೇವಲ ಬರಡು ಮಾತಾಗದೆ, ಮನುಷ್ಯನ ಸಾಮಾನ್ಯಜ್ಞಾನಕ್ಕೆ ಸಮಂಜಸವಾಗಿದ್ದವು. ಇವರ ಚಿಂತನೆಗಳು ತರ್ಕಬದ್ಧವಾಗಿದ್ದವು. ಹಾಗೂ ಕೇಳುವುದಕ್ಕೆ ಬಹಳ ಆಹ್ಲಾದಕರವಾಗಿದ್ದವು. ಅವರು ತಮ್ಮ ವಿಚಾರಗಳನ್ನು ಕಾವ್ಯಮಯವಾಗಿ, ಆಕರ್ಷಣೀಯವಾಗಿ, ವರ್ಣಮಯವಾಗಿ ಪ್ರಸ್ತುತಪಡಿಸಿದರು. ತಮ್ಮ ವಿಚಾರಗಳ ಹಂದರವನ್ನು ಸುಂದರವಾಗಿ ಅವರು ಹೆಣೆಯುತ್ತಾರೆ. ಇದೇ ಸಂದರ್ಭದಲ್ಲಿ ಅವರ ಎಲ್ಲ ಚಿಂತನೆಗಳು ತರ್ಕಬದ್ಧವಾಗಿರುತ್ತವೆ.

''ಸಭಿಕರು ಈ ಭಾಷಣವನ್ನು ಸಂತೋಷದಿಂದ ಸ್ವೀಕರಿಸಿದರು. ಕಡೆಯಲ್ಲಿ ಉತ್ಸಾಹಭರಿತರಾಗಿ ಕರತಾಡನವನ್ನು ಮಾಡಿದರು. ಬಳಿಕ ಪ್ರಶ್ನೋತ್ತರಗಳೂ ಇದ್ದವು. ಕೆಲವು ವಿಚಿತ್ರವಾದ ಪ್ರಶ್ನೆಗಳೂ ಬಂದವು. ಅವುಗಳಲ್ಲಿ ಕೆಲವು ಹೀಗಿದ್ದವು:

ಭಾರತದಲ್ಲಿ ಜನರು ತಮ್ಮ ಮಕ್ಕಳನ್ನು ಮೊಸಳೆಗಳ ದವಡೆಗೆ ನೂಕುತ್ತಾರೆಯೆ?

ಜಗನ್ನಾಥ ರಥಯಾತ್ರೆಯಲ್ಲಿ ಜನರು ತಾವೇತಾವಾಗಿ ಕೊಂದುಕೊಳ್ಳುತ್ತಾರೆಯೆ?

ಗಂಡ ಸತ್ತಾಗ ಹೆಂಡತಿಯನ್ನೂ ಸುಡುತ್ತಾರೆಯೆ?

''ಮೊದಲನೆಯ ಪ್ರಶ್ನೆಗೆ ಸ್ವಾಮೀಜಿ ಅದಕ್ಕೆ ಯೋಗ್ಯವಾದ ತಿರಸ್ಕಾರಭರಿತ ಹಾಸ್ಯಭಾವದಿಂದಲೇ ಉತ್ತರಕೊಟ್ಟರು. ಒಮ್ಮೆ ಹೆಣ್ಣುಮಕ್ಕಳನ್ನು ಮಾತ್ರವೇ ಮೊಸಳೆಗಳಿಗೆ ಕೊಡುತ್ತಾರೆಯೇ ಎಂದು ಕೇಳಿದಾಗ, 'ಹೌದು, ಅವರ ದೇಹ ಮೃದುವಾಗಿ ರುತ್ತದಲ್ಲವೇ, ಅದಕ್ಕೆ' ಎಂದು ಉತ್ತರವಿತ್ತರು. ಜಗನ್ನಾಥ ರಥಯಾತ್ರೆಯ ಬಗ್ಗೆ ಕೇಳಿದಾಗ, ಕೆಲವು ಉತ್ಸಾಹಭರಿತ ಜನರು ರಥವನ್ನು ಎಳೆಯಬೇಕು ಎಂಬ ಆಸಕ್ತಿಯಿಂದ ಜನಗುಂಗುಳಿಯಲ್ಲಿ ನುಗ್ಗಿದಾಗ, ಕೆಲವರಿಗೆ ಪ್ರಾಣಹಾನಿ ಆಗಿರಬಹುದು ಎಂದರು. ಮೂರನೆಯ ಪ್ರಶ್ನೆಗೆ, 'ಹೆಂಡತಿಯನ್ನು ಬೆಂಕಿಯಲ್ಲಿ ಧುಮುಕೆಂದು ಯಾರೂ ಒತ್ತಾಯ ಮಾಡುವುದಿಲ್ಲ' ಎಂದು ಉತ್ತರವಿತ್ತರು ಸ್ವಾಮಿ ವಿವೇಕಾನಂದರು.

''ಇನ್ನು ಪ್ರವಚನದ ವಿಷಯಕ್ಕೆ ಬರುವುದಾದರೆ, ಜೀವನದ ಭೌತಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಲಕ್ಷಣಗಳನ್ನು ಸ್ವಾಮಿ ವಿವೇಕಾನಂದರು ವಿಶ್ಲೇಷಿಸಿ ವಿವರಿಸಿದರು. ದೇಹವೆಂಬುದು ಬರಿಯ ಕೋಶವಿದ್ದಂತೆ; ಮನಸ್ಸು ಕೂಡ ಸೀಮಿತವಾದ ಕೆಲಸವನ್ನು ಮಾಡುತ್ತದೆ; ಆದರೆ ಆತ್ಮ ಮಾತ್ರವೇ ಒಬ್ಬನಿಗೆ ವ್ಯಕ್ತಿತ್ವವನ್ನು ತಂದುಕೊಡುವುದು. ತನ್ನ ಆತ್ಮದಲ್ಲಿ ತಾದಾತ್ಮ್ಯವನ್ನು ಪಡೆದುಕೊಳ್ಳಲು ಮತ್ತು ಆ ಮೂಲಕ ಮುಕ್ತಿಯನ್ನು ಹೊಂದಲು ಹಿಂದೂಗಳು ಪ್ರಯತ್ನಿಸುತ್ತಾರೆ. ಅದನ್ನೇ ವಿಮೋಚನೆ ಎಂದು ಕರೆಯುತ್ತಾರೆ. ಹೀಗೆ ಎಲ್ಲರೂ ಒಪ್ಪಬಹುದಾದ ತರ್ಕಬದ್ಧ ಸರಣಿಯಿಂದ, ಸ್ವಾಮಿ ವಿವೇಕಾನಂದರು ಆತ್ಮವು ಸ್ವತಂತ್ರವಾದುದು ಎಂದು ಎತ್ತಿತೋರಿಸಿದರು.''

ಹೀಗೆ ಪತ್ರಿಕೆಯು ಸ್ವಾಮೀಜಿಯವರ ಪ್ರವಚನದ ಸುದೀರ್ಘ ವರದಿಯನ್ನು ಪ್ರಕಟಿಸಿತು. ಈ ಭಾಷಣವನ್ನು ಮುಂದೆ ಸ್ವಾಮೀಜಿಯ ಅನುಯಾಯಿಯಾದ ಶ್ರೀಮತಿ ಮೇರಿ ಫನ್‌ಕಿ ಕೇಳಿಸಿಕೊಂಡಿದ್ದರು. ಇದರ ವಿಷಯವಾಗಿ ಸ್ವಾಮಿ ಬ್ರಹ್ಮಾನಂದರಿಗೆ ಒಂದು ಪತ್ರವನ್ನು ಕೂಡ ಬರೆದಿದ್ದರು. ಈ ಪತ್ರವು ಮುಂದೆ ರಾಮಕೃಷ್ಣ ಮಹಾಸಂಘದ ಆಂಗ್ಲಪತ್ರಿಕೆ 'ವೇದಾಂತ ಕೇಸರಿ' ಯಲ್ಲಿ ಪ್ರಕಟವಾಯಿತು. ಇದರಲ್ಲಿ ಮೇಲೆ ಉಲ್ಲೇಖಿಸಿದ ವಿಚಿತ್ರ ಪ್ರಶ್ನೆಗಳಿಗೆ ಸ್ವಾಮೀಜಿ ಉತ್ತರಕೊಡುವ ಧಾಟಿಯನ್ನು ಸೊಗಸಾಗಿ ವಿವರಿಸಲಾಗಿದೆ. ಇದರ ಒಂದು ಭಾಗ ಹೀಗಿದೆ:

''ನನಗೆ ಚೆನ್ನಾಗಿ ನೆನಪಿದೆ. ಸ್ವಾಮಿ ವಿವೇಕಾನಂದರು ಡೆಟ್ರಾಯ್ಟ್ ನಗರಕ್ಕೆ ಮೊದಲ ಬಾರಿ ಭೇಟಿಕೊಟ್ಟಾಗ, ಯುನಿಟೇರಿಯನ್ ಚರ್ಚಿನಲ್ಲಿ ಭಾಷಣ ಮಾಡಿದರು. ಅವರು ನಾವು ಕೇಳುವ ಪ್ರಶ್ನೆಗಳಿಗೆ ಉತ್ತರಿಸಲು ಸಂತೋಷದಿಂದ ಒಪ್ಪಿಕೊಂಡಿದ್ದಾರೆ ಎಂಬ ವಿಷಯ ನಮಗೆ ತಿಳಿದುಬಂತು. ಪ್ರಶ್ನೆಗಳನ್ನು ಚೀಟಿಗಳಲ್ಲಿ ಬರೆದು ಹಿಂದಿನ ದಿನ ರಾತ್ರಿಯೇ ಒಂದು ಡಬ್ಬಿಯಲ್ಲಿ ಇರಿಸಬೇಕಾಗಿತ್ತು. ಮರುದಿನ ಸಾಯಂಕಾಲ ಸ್ವಾಮೀಜಿ ಅದಕ್ಕೆ ತುಂಬಿದ ಸಭೆಯಲ್ಲಿ ಉತ್ತರವನ್ನು ಕೊಡುತ್ತಿದ್ದರು. ಬಂದ ಹಲವಾರು ಪ್ರಶ್ನೆಗಳು ಗಂಭೀರವಾಗಿದ್ದವು, ಮತ್ತೆ ಕೆಲವು ಬಾಲಿಶವಾಗಿದ್ದವು. ಆದರೆ ಒಬ್ಬ ಮುಟ್ಠಾಳನು ಹಿಂದೂ ತಾಯಂದಿರು ತಮ್ಮ ಮಕ್ಕಳನ್ನು ಮೊಸಳೆಗಳಿಗೆ ನೀಡುವ ಬಗ್ಗೆ ಪ್ರಶ್ನೆಯನ್ನು ಕೇಳಿದ್ದನು. ಇದನ್ನು ಓದುತ್ತಲೇ ಸ್ವಾಮೀಜಿ ಮುಖವನ್ನು ಹಿಂಡಿಕೊಂಡದ್ದನ್ನು ನಾನು ಪ್ರತ್ಯಕ್ಷವಾಗಿ ನೋಡಿದೆನು. ಅನಂತರ ಅವರು ನಗುಮುಖವನ್ನು ಮಾಡಿಕೊಂಡು, ಅರ್ಧ ಗಂಭೀರ ಮತ್ತು ಅರ್ಧ ಹಾಸ್ಯಭರಿತ ದನಿಯಲ್ಲಿ ಅಣಕವಾಡುವವರಂತೆ ಉತ್ತರವಿತ್ತರು: 'ಹೌದು, ನಾನು ಮಗುವಾಗಿದ್ದಾಗ, ನನ್ನ ತಾಯಿ ಗಂಗೆಗೆ ಕರೆದುಕೊಂಡು ಹೋಗಿದ್ದಳು. ಆದರೆ ನಾನೆಷ್ಟು ದಪ್ಪದ ಚಿಕ್ಕ ಮಗುವಾಗಿದ್ದನೆಂದರೆ, ನನ್ನನ್ನು ಮೊಸಳೆಗಳು ತಿನ್ನುವುದಕ್ಕೆ ನಿರಾಕರಿಸಿಬಿಟ್ಟವು.' ಆಮೇಲೆ ವ್ಯಂಗ್ಯವಾಗಿ ಮುಖಮಾಡುತ್ತ, ಸ್ವಾಮೀಜಿ ಹೇಳಿದರು, 'ಒಮ್ಮೊಮ್ಮೆ ಸ್ಥೂಲಕಾಯದ ಸಂನ್ಯಾಸಿಯಾಗಿರುವುದಕ್ಕೆ ನನಗೆ ಬೇಜಾರಾಗುತ್ತದೆ. ಆದರೆ ಈ ಕಾರಣದಿಂದಲೇ ನಾನು ಮೊಸಳೆಗಳಿಂದ ರಕ್ಷಿಸಲ್ಪಟ್ಟೆ ಎಂದು ನೆನೆಸಿಕೊಂಡಾಗ, ಸಮಾಧಾನವಾಗುತ್ತದೆ.' ತದನಂತರ, ಅವರು ತುಂಬ ಗಂಭೀರಭಾವದವರಾದರು. ಬಹಳ ಅಭಿಮಾನದಿಂದಲೇ, ಗುಡುಗಿನ ದನಿಯಲ್ಲಿ ಅಬ್ಬರಿಸಿದರು: 'ಆದರೆ, ಭದ್ರ ಮಹಿಳೆಯರೇ, ಪುರುಷರೇ. ನಾನು ನಿಮಗೆ ಆಶ್ವಾಸನೆ ನೀಡುತ್ತೇನೆ. ನಾವೆಂದೂ ಮಂತ್ರವಾದಿನಿಯರನ್ನು ಜೀವಂತವಾಗಿ ಸುಡಲಿಲ್ಲ.' ಇದು ಇಡೀ ಸಭೆಯನ್ನು ತಲ್ಲಣಿಸಿತು. ಜನರು ಹರ್ಷೋದ್ಗಾರದ ದನಿಯನ್ನು ಎಬ್ಬಿಸಿದರು. ಅಮೆರಿಕೆಯ ಜನತೆಯ ಹೆಗ್ಗಳಿಕೆಯೇ ಇದು. ತಮ್ಮ ಬಗೆಗಿನ ನಿಂದೆಯನ್ನೂ, ಹಾಸ್ಯವನ್ನೂ ಅವರು ಮೆಚ್ಚಿಕೊಳ್ಳುತ್ತಾರೆ. ಎಲ್ಲಕ್ಕಿಂತ ಮಿಗಿಲಾಗಿ, ನಾವ್ಯಾರೂ ಸಲೇಮ್ ನಗರದಲ್ಲಿ ಜರುಗಿದ ಮಂತ್ರವಾದಿನಿಯರ ಜೀವಂತ ದಹನದ ಬಗ್ಗೆ ಹೆಮ್ಮೆಪಟ್ಟುಕೊಳ್ಳುವುದಿಲ್ಲ.

ಈ ಮೇಲಿನ ಪತ್ರಿಕಾ ವರದಿಯಲ್ಲದೆ, ಟ್ರಿಬ್ಯೂನ್ ಎಂಬ ಪತ್ರಿಕೆಯು ತನ್ನ ಫೆಬ್ರುವರಿ ೧೮ರ ಸಂಚಿಕೆಯಲ್ಲಿ ಸ್ವಾಮೀಜಿಯವರು ಡೆಟ್ರಾಯ್ಟ್ ನಗರದಲ್ಲಿ ಮಾಡಿದ ಮೂರು ಪ್ರವಚನಗಳ ಮಹತ್ವವನ್ನು ಎತ್ತಿತೋರಿಸುವ ಒಂದು ಲೇಖನವನ್ನು ಪ್ರಕಟಿಸಿತು. ಅದರ ಹೆಸರು, 'ನಮ್ಮೊಡನೆ ಇರುವ ಹಿಂದೂ.' ಈ ಲೇಖನದ ಕೆಲವು ಭಾಗಗಳು ಹೀಗಿವೆ:

''ಇಲ್ಲಿನ ಜನರು ಭಾರತದ ಬಗ್ಗೆ ತಿಳಿದಿರುವುದು ಚಿತ್ರದ ಪುಸ್ತಕಗಳ ಮೂಲಕ. ಅದರಲ್ಲಿ ಹಿಂದೂ ತಾಯಿಯು ತನ್ನ ಮಗುವನ್ನು ಮೊಸಳೆಗಳಿಗೆ ನೀಡುತ್ತಿರುವ ಚಿತ್ರ ಇರುತ್ತದೆ. ಇಲ್ಲವೇ, ಜಗನ್ನಾಥನ ದೊಡ್ಡ ರಥವೊಂದು ಭಕ್ತರ ಮೇಲೆ ಹರಿದು, ಜನರು ಸಾಯುತ್ತಿರುವುದನ್ನು ತೋರಿಸುವ ಚಿತ್ರವಿರುತ್ತದೆ. ಭಾರತೀಯ ಹಿಂದೂ ಸಂನ್ಯಾಸಿ ಸ್ವಾಮಿ ವಿವೇಕಾನಂದರು ಒಂದೆರಡು ಗಂಟೆಗಳ ಕಾಲ, ಅಮೆರಿಕದ ಅತ್ಯಂತ ಬುದ್ಧಿವಂತ ಸಭಿಕರು ನಿಶ್ಶಬ್ದವಾಗಿ ಆಲಿಸುತ್ತಿರುವಾಗ, ಭಾರತೀಯ ಧರ್ಮ, ಸಂಪ್ರದಾಯ ಮತ್ತು ಸಾಮಾಜಿಕ ಕಟ್ಟುಪಾಡುಗಳ ಬಗ್ಗೆ ನಿರರ್ಗಳವಾಗಿ ಮಾತನಾಡುವುದನ್ನು ಕಂಡಾಗ, ಅವರಿಗೆ ಅಚ್ಚರಿಯಾಗದೆ ಇರದು. ಈ ವಿದೇಶೀಯನು ಇಂಗ್ಲಿಷ್ ಭಾಷೆಯನ್ನು ಅತ್ಯಂತ ಸುಂದರವಾಗಿ ಮಾತನಾಡುತ್ತಾರೆ. ನಾವು ಹಲವಾರು ವೇದಿಕೆಗಳಲ್ಲಿ ಮತ್ತು ಚರ್ಚುಗಳಲ್ಲಿ ಕೇಳಿಸಿಕೊಳ್ಳುವ ಇಂಗ್ಲಿಷ್ ಭಾಷೆಗಿಂದಲೂ ಸ್ವಾಮಿ ವಿವೇಕಾನಂದರ ಭಾಷಾಶೈಲಿಯು ಎಷ್ಟೋ ಉತ್ತಮವಾಗಿದೆ. ಹಾಗೆಯೇ ಅವರು ಅತ್ಯಂತ ಸುಸಂಸ್ಕೃತವಾದ ಹಾಸ್ಯವನ್ನು ತಮ್ಮ ಭಾಷಣದ ಮಧ್ಯದಲ್ಲಿ ಬಳಸುತ್ತಾರೆ. ನಾವು ಸಾರ್ವಜನಿಕ ಭಾಷಣಗಳಲ್ಲಿ ಕೇಳುವ ಅನೇಕ ಭಾಷಣಕಾರರಿಗಿಂತ ಅದು ಎಷ್ಟೋ ಚೆನ್ನಾಗಿರುತ್ತದೆ. ಅವರ ಬುದ್ಧಿಮತ್ತೆಯಾದರೋ ಅದ್ಭುತವಾದುದು. ಅವರು ನಮ್ಮ (ಪಾಶ್ಚಾತ್ಯ ಸಂಸ್ಕೃತಿಯ) ಕುಂದುಕೊರತೆಗಳನ್ನು ನಿಂದಿಸುವಾಗ, ಅದನ್ನು ನಯವಾಗಿ ಮಾಡುತ್ತಾರೆ. ಅದು ಕತ್ತಿಯಿಂದ ಬಗೆಯುವುದಕ್ಕಿಂತಲೂ, ಸೂಜಿಯಿಂದ ತಿವಿಯುವಂತೆ ಇರುತ್ತದೆ. ಅವರ ಭಾಷಣಾ ವಿಧಾನ ಇಲ್ಲಿನ ಸಾಂಪ್ರದಾಯಿಕ ಭಾಷಣಕಾರರು ಬಳಸುವ ಬಗೆಯಂತೆಯೇ ಇರುತ್ತದೆ. ಅವರು ವೇದಿಕೆಯ ಮೇಲೆ ನಡೆದಾಡುತ್ತಲೇ ಭಾಷಣ ಮಾಡುತ್ತಾರೆ. ತರ್ಕಬದ್ಧವಾಗಿ ಮಾತನಾಡುತ್ತಾರೆ. ಅವರ ತರ್ಕದ ವಿಧಾನವನ್ನು ಕೇಳಿದಾಗ, ಅವರು ಇತಿಹಾಸ ಮತ್ತು ಡಾರ್ವಿನ್ನನ ಸಿದ್ಧಾಂತಗಳ ಬಗ್ಗೆ ಮಾತನಾಡುವ ಪ್ರಸಿದ್ಧ ಭಾಷಣಕಾರನಾದ ಜಾನ್ ಫಿಸ್ಕೆ ಅವರನ್ನು ಹೋಲುತ್ತಾರೆ.

‘‘ಸ್ವಾಮಿ ವಿವೇಕಾನಂದರನ್ನು ಮೆಚ್ಚಿಕೊಳ್ಳಲು ಅಥವಾ ಅವರ ಭಾಷಣವನ್ನು ಕೇಳಿ ಸಂತೋಷಪಡಲು, ನಾವೇನೂ ಹಿಂದೂಗಳಾಗಿರಬೇಕಾಗಿಲ್ಲ , ಅಥವಾ ಹಿಂದೂ ಧಾರ್ಮಿಕ ನಂಬಿಕೆಗಳಲ್ಲಿ ವಿಶ್ವಾಸವನ್ನು ಇಟ್ಟುಕೊಂಡಿರಬೇಕಾಗಿಲ್ಲ. ಇವರು ಹಿಂದಿನ ವಾರ ಮೂರು ಪ್ರವಚನಗಳನ್ನು ಈಗಾಗಲೇ ನೀಡಿದ್ದಾರೆ. ಅವರು ಪ್ರಯಾಸವಿಲ್ಲದೆ, ಪ್ರತಿ ಸಂಜೆಯೂ ಹೊಸ ಹೊಸ ವಿಷಯಗಳ ಬಗ್ಗೆ ಆಕರ್ಷಯುತವಾಗಿ ಮಾತನಾಡಬಲ್ಲರು. ಅವರು ತಮ್ಮ ಭಾಷಣಕ್ಕೆ ಯಾವ ಕಾಗದವನ್ನೂ ಇಟ್ಟುಕೊಳ್ಳುವುದಿಲ್ಲ. ಇಲ್ಲವೇ ಸಮಯವು ತೀರಿತೆಂಬ ಒಂದೇ ಕಾರಣವನ್ನು ಹೊರತುಪಡಿಸಿ, ಯಾವುದೇ ವಿಷಯ ವನ್ನೂ ಹಠಾತ್ತನೆ ನಿಲ್ಲಿಸುವುದಿಲ್ಲ. ಹಾಗೆಂದು ಅವರು ‘ವಾಚಾಳಿ’ಯೇನೂ ಅಲ್ಲ. ಅವರು ಭಾಷಣವನ್ನು ಪ್ರಸ್ತುತಪಡಿಸುವ ವಿಧಾನ, ವಾಕ್ಯಪುಂಜಗಳನ್ನು ಧಾರಾಕಾರವಾಗಿ ಹರಿಸುವ ಅವರ ಕಲೆ – ಇವುಗಳನ್ನು ಎಷ್ಟು ಹೊಗಳಿದರೂ ಕಡಿಮೆಯೇ.’’

ಮೇಲೆ ಉಲ್ಲೇಖಿಸಿದೆಲ್ಲವೂ ಉದಾರ ಕ್ರೈಸ್ತರ ಅಭಿಪ್ರಾಯಗಳಾಗಿದ್ದವು. ಇವುಗಳು ಮತ್ತು ಸ್ವಾಮಿ ವಿವೇಕಾನಂದರ ಸ್ವಂತ ಮಾತುಗಳು ಕಟ್ಟಾ ಸಂಪ್ರದಾಯಸ್ಥರನ್ನು ಕೋಪಕ್ಕೆ ಈಡುಮಾಡಿದವು. ಸ್ವಾಮೀಜಿಯವರ ವಿರೋಧಿಗಳು ತಮ್ಮೆಲ್ಲ ಟೀಕೆಟಿಪ್ಪಣಿಗಳನ್ನು ಸ್ವಾಮೀಜಿಯವರ ಪ್ರವಚನಗಳ ಪತ್ರಿಕಾವರದಿಗಳ ಮೇಲೆಯೇ ಆಧರಿಸಿದ್ದರು. ಇದಲ್ಲದೆ, ಸ್ವಾಮೀಜಿಯವರ ‘ಮಾನವನ ದಿವ್ಯತೆ’ ಎಂಬ ಭಾಷಣವಾದ ಮೇಲೆ ಪ್ರತಿ ಭಾನುವಾರವೂ ಚರ್ಚುಗಳ ವೇದಿಕೆಯ ಮೇಲಿಂದ, ಅದರ ಬಗ್ಗೆ ಚರ್ಚೆ ನಡೆದೇ ಇತ್ತು. ಕೆಲವು ಚರ್ಚ್ ಉಪದೇಶಕರು ಸ್ವಾಮೀಜಿಯವರ ನಿಲುವನ್ನು ಸಮರ್ಥಿಸಿದರೆ, ಮತ್ತೆ ಕೆಲವರು ಅವರನ್ನು ಕಟುವಾಗಿ ಟೀಕಿಸಿದರು. ಇವುಗಳ ಸಂಪೂರ್ಣ ವಿವರವನ್ನು ಆ ಕಾಲದ ಪತ್ರಿಕೆಗಳು ಪ್ರಕಟಿಸಿದವು.

ಇದಲ್ಲದೆ ‘ಈವ್‌ನಿಂಗ್ ನ್ಯೂಸ್’ ಎನ್ನುವ ಪತ್ರಿಕೆಯು ತನ್ನ ಫೆಬ್ರವರಿ ೨೦, ೧೯೮೪ರಂದು ಒಂದು ಲೇಖನವನ್ನು ಪ್ರಕಟಿಸಿತು. ಇದರ ಶೀರ್ಷಿಕೆ ‘ಸ್ವಾಮಿ ವಿವೇಕಾನಂದರ ಅದ್ಭುತ ಅದೃಷ್ಟ’ ಎಂದು. ಈಗಾಗಲೇ ಸ್ವಾಮೀಜಿಯವರನ್ನು ಸಮರ್ಥಿಸಿ, ಎರಡು ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. ಇವುಗಳಿಂದ ಈ ಪತ್ರಿಕೆಯ ಸಂಪಾದಕನಿಗೆ ಕೋಪ ಬಂದಿರಬಹುದು. ಹೀಗಾಗಿ ಅವನು ಸ್ವಾಮಿ ವಿವೇಕಾನಂದರನ್ನು ಕಟುವಾಗಿ ಟೀಕಿಸಿ ಸಂಪಾದಕೀಯವನ್ನು ಬರೆದನು.

ಆದರೆ ಸ್ವಾಮಿ ವಿವೇಕಾನಂದರ ಅಭಿಮಾನಿಗಳು ಈ ಅಬದ್ಧ ಬರಹಕ್ಕೆ ತೀಕ್ಷ್ಣವಾದ ಪ್ರತಿಕ್ರಿಯೆಯನ್ನು ನೀಡಿದರು. ಫ್ರೀ ಪ್ರೆಸ್ ಜರ್ನಲ್ ಪತ್ರಿಕೆಯ ಫೆಬ್ರವರಿ ೨೩, ೧೮೯೪ರ ಸಂಚಿಕೆಯಲ್ಲಿ ಅಂಥ ಒಂದು ಪತ್ರ ಪ್ರಕಟವಾಯಿತು. ಅದರ ಒಂದು ಭಾಗ ಹೀಗಿದೆ:

‘‘ಸ್ವಾಮಿ ವಿವೇಕಾನಂದರು ತಮ್ಮ ಭಾಷಣದಲ್ಲಿ ಕ್ರೈಸ್ತಮತದ ಬಗ್ಗೆ ಮಾಡಿದ ಕೆಲವು ಟೀಕೆಟಿಪ್ಪಣಿಗಳ ಬಗ್ಗೆ ಹಲವು ಪತ್ರಿಕೆಗಳಲ್ಲಿ ಪ್ರಬಲವಾದ ವಿರೋಧ ವ್ಯಕ್ತವಾಗಿದೆ. ಆದರೆ ಅವರ ಪ್ರವಚನಗಳನ್ನು ಕೇಳಿಸಿಕೊಂಡ ಯಾರೂ ಸತ್ಯವಾಗಿ ಅವರು ನಮ್ಮ ಧರ್ಮದ ಮೇಲೆಯೇ ಆಘಾತವನ್ನು ಮಾಡಿದರು ಎಂದು ಹೇಳಲು ಸಾಧ್ಯವೇ ಇಲ್ಲ. ಇಲ್ಲಿ ಧರ್ಮ ಎಂದರೆ ಯಾವುದನ್ನು ಏಸುಕ್ರಿಸ್ತ ಬೋಧಿಸಿದನೋ ಅದು. ಇದಕ್ಕೆ ಬದಲಾಗಿ ಸ್ವಾಮಿ ವಿವೇಕಾನಂದರು ಏಸುಕ್ರಿಸ್ತ ಮತ್ತು ಆತನ ಜೀವಿತಕಾರ್ಯಗಳ ಬಗ್ಗೆ ಪ್ರೇಮ ಮತ್ತು ಗೌರವದಿಂದಲೇ ಮಾತನಾಡುತ್ತಾರೆ. ಅವರು ನಿಂದಿಸಿದ್ದು ಯಾವುದೆಂದರೆ, ಕ್ರೈಸ್ತಧರ್ಮದ ಬಾಹ್ಯ ಬೂಟಾಟಿಕೆಯನ್ನು – ಕಟ್ಟಾ ಸಂಪ್ರದಾಯತನ, ಕುರುಡು ನಂಬಿಕೆಗಳು, ಮತಾಂಧತೆ ಮುಂತಾದವನ್ನು. ಇವು ನಮ್ಮ ಧರ್ಮವನ್ನು ಅಧಃಪತನಕ್ಕೆ ಕೊಂಡೊಯ್ಯುತ್ತದೆ. ಇನ್ನೊಂದು ಕಡೆ, ನಮ್ಮ ಸಾಮಾಜಿಕ ಮತ್ತು ಉದ್ಯಮ ಜೀವನದಲ್ಲಿ ಅಪ್ರಮಾಣಿಕತೆ, ಕ್ರೌರ್ಯ, ಧಾರ್ಮಿಕ ಅಸಹನೆ ಮತ್ತು ವಿಪರೀತ ಸ್ವಾರ್ಥಗಳು ತಾಂಡವವಾಗುತ್ತಿವೆ. ಇದನ್ನೂ ಸ್ವಾಮಿ ವಿವೇಕಾನಂದರು ಟೀಕಿಸಿದರು. ಇದು ಒಳ್ಳೆಯದೇ ಅಲ್ಲವೆ?

‘‘ಮೇಲಿನ ಎಲ್ಲ ಸಂಗತಿಗಳನ್ನು ಗಮನಿಸಿದಾಗ, ಸ್ವಾಮಿ ವಿವೇಕಾನಂದರು ವ್ಯಕ್ತಪಡಿಸಿದ ಕಟುಸತ್ಯಗಳು ವಾಸ್ತವಾಂಶಗಳೇ ಎಂದು ಗೊತ್ತಾಗುತ್ತದೆ. ಆದರೂ ಅವರನ್ನು ಚಿಕಾಗೋ ನಗರದಲ್ಲಿ ಕೆಲವು ಮತಾಂಧ ಮಹಿಳೆಯರು ಅವಮಾನಕ್ಕೆ ಗುರಿಮಾಡಿದರು. ಹಾಗೂ, ಈ ಡೆಟ್ರಾಯ್ಟ್ ನಗರದಲ್ಲಿ ಅವರನ್ನು ಹೀಯಾಳಿಸುವ ಪತ್ರಗಳು ಪತ್ರಿಕೆಗಳಲ್ಲಿ ಪ್ರಕಟವಾಯಿತು. ಆದರೂ ತಮ್ಮನ್ನು ಅವಹೇಳನ ಮಾಡಿದವರ ವಿರುದ್ಧ ಸ್ವಾಮಿ ವಿವೇಕಾನಂದರು ಒಂದು ಪದವನ್ನೂ ಉಚ್ಚರಿಸಲಿಲ್ಲ. ಹಾಗೂ ಒಂದು ಲೆಕ್ಚರ್ ಬ್ಯೂರೋ ಅವರನ್ನು ಅನ್ಯಾಯಯುತವಾಗಿ ನಡೆಸಿಕೊಂಡಿತು. ಅವರಿಗೆ ಸಲ್ಲಬೇಕಾಗಿದ್ದ ಹಣವನ್ನು ಲೂಟಿಮಾಡಿತು. ಪಾಪ, ಸ್ವಾಮಿ ವಿವೇಕಾನಂದರಿಗೆ ಇಲ್ಲಿನ ಕಾನೂನುಗಳ ಮತ್ತು ಪದ್ಧತಿಗಳ ಪರಿಚಯ ಇರಲಿಲ್ಲ. ಹೀಗಾಗಿ ಅವರನ್ನು ಲೆಕ್ಚರ್ ಬ್ಯೂರೋದವರು ದುರುಪಯೋಗ ಮಾಡಿಕೊಂಡರು. ಹಾಗೆಯೇ ಅವರ ಬಗ್ಗೆ ಇಲ್ಲಸಲ್ಲದ ಅಪವಾದಗಳನ್ನು ಹೇರಿ, ಪುಟಗಟ್ಟಲೆ ಪತ್ರಿಕೆಗಳಲ್ಲಿ ಲೇಖನಗಳನ್ನು ಕೂಡ ಬರೆಯಲಾಯಿತು. ಅವುಗಳು ಜನರನ್ನು ತಪ್ಪುದಾರಿಗೆ ಸೆಳೆಯುವ ಲೇಖನಗಳು. ಅವರ ಮಾತುಗಳನ್ನು ಸರಿಯಾಗಿ ಕೇಳಿಸಿಕೊಳ್ಳದೆ, ಅವರ ಬಗ್ಗೆ ನ್ಯಾಯನಿರ್ಧಾರ ಮಾಡುವ ಅಧಿಕಾರ ಅಂಥ ಜನರಿಗೆ ಹೇಗೆ ತಾನೇ ಇದೆ? ಹಾಗೆಂದೇ ಏಸುಕ್ರಿಸ್ತ ಬೈಬಲ್ಲಿನಲ್ಲಿ ಹೇಳಿದ್ದಾನೆ: ‘ಬೇರೆಯವರ ಬಗ್ಗೆ ನ್ಯಾಯನಿರ್ಧಾರಣೆ ಮಾಡಬೇಡ; ನಿನ್ನ ಬಗ್ಗೆ ಕೂಡ ಇತರರು ನ್ಯಾಯನಿರ್ಧಾರ ಮಾಡುತ್ತಾರೆ.’ ’’

*(ಮುಂದುವರಿಯುವುದು)*